C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಸ್ಪೆಷಲ್. ಸಿ ಸಂಖ್ಯೆ: 49/2020**

**ಪ್ರಾಸಾ.01 ಚಾಸಾ.03**

**ಸಾಕ್ಷಿದಾರರ ಹೆಸರು** : ಶಂಕರ್ ರಾವ್

**ತಂದೆಯ ಹೆಸರು** : ಜಿ. ವೆಂಕೋಬ ರಾವ್.

**ವಯಸ್ಸು** : 54 ವರ್ಷಗಳು

**ಉದ್ಯೋಗ** : ಎಲೆಕ್ಟ್ರೀಷಿಯನ್.

**ವಾಸ** : : ಹೊಸಹಳ್ಳಿ.

**ಪ್ರಮಾಣ ವಚನ ಬೋಧಿಸಿದ ದಿನಾಂಕ: 09.07.2024**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾ.ಸಾ.1 ಲೋಕೇಶ್ ಗೊತ್ತು. ಚಾ.ಸಾ.2 ಮತ್ತು 4 ಗೊತ್ತು. ದಿನಾಂಕ 26.08.2018 ರಂದು ಹೊಸಹಳ್ಳಿ ಪೋಲೀಸ್ ಸ್ಟೇಷನ್ ರವರು ನನಗೆ ಕರೆ ಮಾಡಿ ಠಾಣೆಗೆ ಬರಲು ಹೇಳಿದರು. ಆಗ ನಾನು ಹೊಸಹಳ್ಳಿ ಪೋಲೀಸ್ ಠಾಣೆಗೆ ಹೋದೆ. ಆಗ ಪೋಲೀಸ್ ಇನ್ಸ್ ಪೆಕ್ಟರ್ ರಾಮಯ್ಯ ರವರು ಗೌರಮ್ಮನ ಕೆರೆ ಬಳಿ ಹೆಣ ಬಿದ್ದಿದೆ ಅಲ್ಲಿಗೆ ಹೋಗೋಣ ಬನ್ನಿ ಎಂದು ತಿಳಿಸಿದರು. ಆ ಸಮಯದಲ್ಲಿ ಪೋಲೀಸ್ ಠಾಣೆಯಲ್ಲಿ ಮುನಿರಾಜು ( 6 ನೇ ಆರೋಪಿ) ಇದ್ದರು. ನಂತರ ನಾನು, ಪೋಲೀಸ್ ಸಿಬ್ಬಂದಿಗಳು ಮತ್ತು 6 ನೇ ಆರೋಪಿ ಜೀಪಿನಲ್ಲಿ ಸದರಿ ಉಜ್ಜನಿ ಗ್ರಾಮದ ಗೌರಮ್ಮನ ಕೆರೆ ಬಳಿ ಹೋದೆವು. ಸದರಿ ಸ್ಥಳಕ್ಕೆ ಹೋದಾಗ 6 ನೇ ಆರೋಪಿ ಕೆರೆ ಅಂಗಳದಲ್ಲಿ ನಡೆದುಕೊಂಡು ಹೋಗಿ ಒಂದು ಗುಂಡಿ ತೋರಿಸಿ ಹೆಣ ಇಲ್ಲಿ ಬಿದ್ದಿದೆ ಎಂದು ತೋರಿಸಿದನು. ಆ ಸಮಯದಲ್ಲಿ 4 ಜನ ಸದರಿ ಗುಂಡಿಯಿಂದ ಮಣ್ಣು ಎತ್ತಿದರು. ಮಣ್ಣು ಎತ್ತಿದ ಮೇಲೆ ಮನುಷ್ಯ ಸತ್ತ ವಾಸನೆ ಬಂತು. ಸದರಿ ಗುಂಡಿಯಲ್ಲಿ ಒಂದು ಶವ ದೊರೆಯಿತು. ಅಲ್ಲಿದ್ದ ಕೂಲಿ ಕಾರ್ಮಿಕರು ಶವವನ್ನು ಗುಂಡಿಯಿಂದ ಮೇಲೆ ಎತ್ತಿದರು. ಆ ಸಮಯದಲ್ಲಿ ಚಾ.ಸಾ.1 ರವರು ಶವವನ್ನು ನೋಡಿ ಸದರಿ ಶವ ನನ್ನ ತಮ್ಮನದು ಎಂದು

ಹೇಳಿದರು. ಆ ಸಮಯದಲ್ಲಿ ಪೋಲೀಸರವರು ಪಂಚನಾಮೆ ಮಾಡಿರುತ್ತಾರೆ. ಈಗ ತೋರಿಸಿದ ಎಕ್ಸುಮೇಷನ್ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ **ಎಕ್ಸುಮೇಷನ್ ಪಂಚನಾಮೆಯನ್ನು ನಿ.ಪಿ-1** ಎಂದು, **ಸಾಕ್ಷಿಯ ಸಹಿಯನ್ನು ನಿ.ಪಿ-1(ಎ)** ಎಂದು ಗುರುತಿಸಲಾಯಿತು.

2. ಶವದ ಮೇಲೆ ಒಂದು ವಾಚು, ಬನಿಯನ್, ಅಂಡರ್ ವೇರ್, ಟವಲ್, ಶರ್ಟ್, ಬೆಡ್ ಶೀಟ್,?ಮೊಬೈಲ್ ಫೋನ್ ಇತ್ತು. ಶವದ ಚರ್ಮ ಕಿತ್ತುಹೋಗಿತ್ತು. ಎಡಗೈ ಎದೆ ಮೇಲೆ ಇತ್ತು, ಬಲಗೈ ನೇರವಾಗಿತ್ತು. ಸದರಿ ಸ್ಥಳದಲ್ಲಿ ಪೋಲೀಸರವರು ಶವದ ಮೇಲೆ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಈಗ ತೋರಿಸಿದ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. **ನೋಟೀಸನ್ನು ನಿ.ಪಿ-2** ಎಂದು, **ಸಾಕ್ಷಿಯ ಸಹಿಯನ್ನು ನಿ.ಪಿ-2(ಎ)** ಎಂದು ಗುರುತಿಸಲಾಯಿತು. ಈಗ ತೋರಿಸಿದ ಶವ ತನಿಖಾವರದಿಯಲ್ಲಿ ನನ್ನ ಸಹಿ ಇರುತ್ತದೆ. **ಶವ ತನಿಖಾ ವರದಿಯನ್ನು ನಿ.ಪಿ-3** ಎಂದು, **ಸಾಕ್ಷಿ ಸಹಿಯನ್ನು ನಿ.ಪಿ-3(ಎ)** ಎಂದು ಗುರುತಿಸಲಾಯಿತು. ನಿ.ಪಿ-1 ಪಂಚನಾಮೆಯನ್ನು ಬೆಳಗ್ಗೆ 11-30 ಗಂಟೆಯಿಂದ ಮಧ್ಯಾಹ್ನ 1-45 ಗಂಟೆವರೆಗೆ ಮಾಡಿರುತ್ತಾರೆ. ನಿ.ಪಿ-3 ಶವ ತನಿಖಾ ವರದಿಯನ್ನು ಮಧ್ಯಾಹ್ನ 1-45 ಗಂಟೆಯಿಂದ 4-45 ಗಂಟೆವರೆಗೆ ಮಾಡಿರುತ್ತಾರೆ. ಮಹಜರ್ ಕ್ರಮ ಜರುಗಿಸುವಾಗ ಸ್ಥಳದಲ್ಲಿ ತಹಸೀಲ್ದಾರ್ ಮತ್ತು ಫೋಟೋಗ್ರಾಫರ್ ಗಳು ಇದ್ದರು.

3. ಈಗ ತೋರಿಸಿದ ಫೋಟೋ **ಮೃತನ ಫೋಟೋ** ಆಗಿರುತ್ತದೆ. ಅದನ್ನು **ನಿ.ಪಿ-4** ಎಂದು ಗುರುತಿಸಲಾಯಿತು. ಈಗ ತೋರಿಸಿದ ಎರಡೂ ಫೋಟೋಗಳು **ಪೋಲೀಸ್ ಠಾಣೆಯಲ್ಲಿ ತೆಗೆದ ಫೋಟೋ**ಗಳಾಗಿರುತ್ತವೆ. ಆ ಫೋಟೋಗಳಲ್ಲಿ ನಾನು ಇರುತ್ತೇನೆ. ಸದರಿ ಫೋಟೋಗಳನ್ನು **ನಿ.ಪಿ-5 ಹಾಗೂ ನಿ.ಪಿ-6** ಎಂದು ಗುರುತಿಸಲಾಯಿತು. ಈಗ ತೋರಿಸಿದ 18 ಫೋಟೋಗಳು ಸದರಿ ಗೌರಮ್ಮನ ಕೆರೆ ಬಳಿ ತೆಗೆದ ಫೋಟೋಗಳಾಗಿರುತ್ತವೆ. ಸದರಿ ಫೋಟೋಗಳನ್ನು **ನಿ.ಪಿ-7 ರಿಂದ ನಿ.ಪಿ-24** ಎಂದು ಗುರುತಿಸಲಾಯಿತು.( ಆರೋಪಿ ಪರ ವಕೀಲರು ಸದರಿ ಫೋಟೋಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಕ್ಕೆ ತನಿಖಾಧಿಕಾರಿ ಕಲಂ 65ಬಿ ಸರ್ಟಿಫಿಕೇಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ, ಆದ್ದರಿಂದ ಸದರಿ ಫೋಟೋಗಳನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದರಿಂದ, ಸದರಿ ಫೋಟೋಗಳನ್ನು ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆಗಳಾಗಿ ಗುರುತಿಸಲಾಯಿತು).

**ಈ ಹಂತದಲ್ಲಿ ನ್ಯಾಯಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಸಾಕ್ಷಿಗೆ ದಿನಾಂಕಃ 09.07.2024 ರಂದು ಮಧ್ಯಾಹ್ನ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

4. 6 ನೇ ಆರೋಪಿ ಮುನಿರಾಜುನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 6 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಮಾನತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಶರ್ಟನ್ನು ನೋಡುತ್ತಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಬನಿಯನ್ ಅನ್ನು ನೋಡುತ್ತಿದ್ದು ಅದನ್ನು ಮು.ಮಾ-2 ಎಂದು ಗುರುತಿಸಲಾಯಿತು. ಲುಂಗಿಯನ್ನು ನೋಡುತ್ತಿದ್ದು ಅದನ್ನು ಮು.ಮಾ-3 ಎಂದು ಗುರುತಿಸಲಾಯಿತು. ಅಂಡರ್ ವೇರ್ ಅನ್ನು ನೋಡುತ್ತಿದ್ದು ಅದನ್ನು ಮು.ಮಾ-4 ಎಂದು ಗುರುತಿಸಲಾಯಿತು. ಟವಲ್ ಅನ್ನು ನೋಡುತ್ತಿದ್ದು ಅದನ್ನು ಮು.ಮಾ-5 ಎಂದು ಗುರುತಿಸಲಾಯಿತು. ಬೆಡ್ ಶೀಟನ್ನು ನೋಡುತ್ತಿದ್ದು ಅದನ್ನು ಮು.ಮಾ-6 ಎಂದು ಗುರುತಿಸಲಾಯಿತು. ಗೋಲ್ಡ್ ಕೇಸ್ ನ ಸೋನಾಟಾ ವಾಚ್ ಅನ್ನು ನೋಡುತ್ತಿದ್ದು ಅದನ್ನು ಮು.ಮಾ-7 ಎಂದು ಗುರುತಿಸಲಾಯಿತು. ಲಾವಾ ಮೊಬೈಲ್ ಫೋನನ್ನು ನೋಡುತ್ತಿದ್ದು ಅದನ್ನು ಮು.ಮಾ-8 ಎಂದು ಗುರುತಿಸಲಾಯಿತು.

(ಸದರಿ ವಸ್ತುಗಳನ್ನು ಪ್ರತ್ಯೇಕವಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು, ಅವುಗಳನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ಅನ್ನು ಒಡೆದು ಸಾಕ್ಷಿಗೆ ತೋರಿಸಿ ನಂತರ ಮುದ್ದೆಮಾಲಾಗಿ ಗುರುತಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಪಿ.ವೈ.ಆರ್., ವಕೀಲರಿಂದ - 2, 3, 7 ಮತ್ತು 8ನೇ ಆರೋಪಿಗಳ ಪರವಾಗಿಃ**

6. ನಾನು ಹೊಸಹಳ್ಳಿ ಪೋಲೀಸ್ ಠಾಣೆಯಲ್ಲಿ ಪಾರ್ಟ್ ಟೈಮ್ ಕೆಲಸ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನಾನು ಪೋಲೀಸ್ ಠಾಣೆಯಲ್ಲಿ ಕಸ ಗುಡಿಸುವುದು, ಗಿಡಕ್ಕೆ ನೀರು ಹಾಕುವುದು ಮತ್ತು ಪೋಲೀಸರು ಹೇಳಿದ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತೇನೆ ಎಂದರೆ ಸರಿ. ಪೋಲೀಸರು ಪ್ರತೀ ತಿಂಗಳು ನನಗೆ ಖರ್ಚಿಗೆ ಸ್ವಲ್ಪ ಹಣ ಕೊಡುತ್ತಾರೆ ಎಂದರೆ ಸರಿ. ನಾನು ಹೊಸಹಳ್ಳಿ ಪೋಲೀಸ್ ಠಾಣೆಯಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಹೊಸಹಳ್ಳಿ ಪೋಲೀಸ್ ಠಾಣೆಯ ಸಿಬ್ಬಂಧಿಗಳ ಜೊತೆ ಒಳ್ಳೆ ವಿಶ್ವಾಸ ಇದೆ ಎಂದರೆ ಸರಿ. ನಾನು ಹೊಸಹಳ್ಳಿ ಪೋಲೀಸ್ ಠಾಣೆಯ ಸುಮಾರು ಪ್ರಕರಣಗಳಲ್ಲಿ ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ಹೊಸಹಳ್ಳಿ ಪೋಲೀಸ್ ಠಾಣೆಯವರು ನನ್ನನ್ನು ಮಹಜರ್ ಮಾಡುವ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಾರೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ನಾನು ಹೊಸಹಳ್ಳಿ ಪೋಲೀಸ್ ಠಾಣೆಗೆ ಸೇರಿದ ಸುಮಾರು 3 ಪ್ರಕರಣಗಳಲ್ಲಿ ಮಹಜರ್ ದಾಖಲೆಗೆ ಸಹಿ ಹಾಕಿರುತ್ತೇನೆ.

7. ಶವವನ್ನು ಗುಂಡಿಯಿಂದ ತೆಗೆದ ಕಾರ್ಮಿಕರು ಮಹಜರ್ ದಾಖಲೆಗೆ ಸಹಿ ಹಾಕಿರುವುದಿಲ್ಲ. ಸದರಿ 4 ಜನ ಕಾರ್ಮಿಕರು ದೊಡ್ಡಬಳ್ಳಾಪುರ ಗ್ರಾಮದವರು, ಅವರನ್ನು ಯಾರು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಜೀಪಿನಲ್ಲಿ ಹೋಗುವಾಗ ಸದರಿ 4 ಜನ ಕಾರ್ಮಿಕರು ನಮ್ಮ ಜೀಪಿನ ಹಿಂದೆ ಆಟೋದಲ್ಲಿ ಬಂದರು. ನಾವು ಸ್ಥಳಕ್ಕೆ ತಲುಪಿದ ಮೇಲೆ ಜೀಪು ಮತ್ತು ಆಟೋವನ್ನು ನಿಲ್ಲಿಸಿ ಗುಂಡಿಯ ಬಳಿಗೆ ನಡೆದುಕೊಂಡು ಹೋದೆವು. ಜೀಪು ನಿಲ್ಲಿಸಿದ ಜಾಗದಿಂದ ಶವ ದೊರೆತ ಗುಂಡಿಯ ಬಳಿಗೆ ಸುಮಾರು ಅರ್ಧ ಕಿ.ಮೀಆಗುತ್ತದೆ. ಆ ಸಮಯದಲ್ಲಿ 4-5 ಜನ ಪೋಲೀಸರು ಇದ್ದರು. ಅವರ ಹೆಸರುಗಳು ಮಲ್ಲಿಕಾರ್ಜುನ್, ಪುಟ್ಟರಾಜು, ರಾಧಾಕೃಷ್ಣನ್, ಡ್ರೈವರ್ ವಿವೇಕ್, ಸಬ್ ಇನ್ಸ್ ಪೆಕ್ಟರ್ ರಾಮಯ್ಯ ಇದ್ದರು. ಪೋಲೀಸರ ಜೊತೆ ನಾನೊಬ್ಬನೆ ಹೋಗಿದ್ದೆ. ಜೀಪನ್ನು ನಿಲ್ಲಿಸಿದ ಸ್ಥಳದಿಂದ 4 ಜನ ಕಾರ್ಮಿಕರು ಗುಂಡಿಯ ವರೆಗೆ ನಡೆದುಕೊಂಡು ಬಂದರು. ಮಹಜರ್ ದಾಖಲೆಯನ್ನು ತಹಸೀಲ್ದಾರ್ ರವರು ಪೋಲೀಸ್ ಮಲ್ಲಿಕಾರ್ಜುನ್ ರವರಿಗೆ ಹೇಳಿ ಬರೆಸಿರುತ್ತಾರೆ. ಮಲ್ಲಿಕಾರ್ಜುನ್ ರವರು ಮಹಜರ್

ದಾಖಲೆಯನ್ನು ಕೈಯಲ್ಲಿ ಬರೆದಿರುತ್ತಾರೆ. ಬರೆದಿರುವ ದಾಖಲೆಗೆ ತಹಸೀಲ್ದಾರ್ ರವರು ಸಹಿ ಮಾಡಿದರು ಮತ್ತು ಲ್ಯಾಪ್ ಟಾಪ್ ನಲ್ಲೂ ಸಹ ಟೈಪ್ ಮಾಡಿಕೊಂಡರು. ಸಾಕ್ಷಿ ಮುಂದುವರೆದು ಮಲ್ಲಿಕಾರ್ಜುನ್ ರವರು ದಾಖಲೆಯನ್ನು ಕೈಯಲ್ಲಿ ಬರೆಯುತ್ತಿದ್ದರು, ಮತ್ತೊಬ್ಬರು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಾನು ಆ ದಿವಸ ಬೆಳಗ್ಗೆ 11-00 ಗಂಟೆಗೆ ಹೋಗಿ ಸಂಜೆ 5-00 ಗಂಟೆ ವರೆಗೆ ಸ್ಥಳದಲ್ಲೇ ಇದ್ದೆ. ತಹಸೀಲ್ದಾರ್ ರವರು 3-30 ರಿಂದ 4-00 ಗಂಟೆಗೆ ವಾಪಸ್ಸು ಹೋಗಿರುತ್ತಾರೆ. ನಾವು ಮತ್ತು ಪೋಲೀಸರವರು 5-00 ಗಂಟೆಗೆ ವಾಪಸ್ಸು ಹೋಗಿರುತ್ತೇವೆ. ಲ್ಯಾಪ್ ಟಾಪ್ ನಿಂದ ಪ್ರಿಂಟನ್ನು ಸ್ಥಳದಲ್ಲೇ ತೆಗೆದುಕೊಂಡಿರುತ್ತಾರೆ. ನಾನು ಸದರಿ ಸ್ಥಳಕ್ಕೆ ಹೋಗಿರುವುದಿಲ್ಲ, ನನ್ನ ಸಮಕ್ಷಮ ಯಾವುದೇ ಶವವನ್ನು ಹೊರತೆಗೆದಿರುವುದಿಲ್ಲ, ನನ್ನ ಸಮಕ್ಷಮ ಯಾವುದೇ ಎಕ್ಸುಮಿಷನ್ ಪಂಚನಾಮೆ ಮತ್ತು ಶವಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ, ನಾನು ಹೊಸಹಳ್ಳಿ ಪೋಲೀಸ್ ಠಾಣೆಯಲ್ಲಿ ಕೆಲಸ ಮಾಡುವುದರಿಂದ ನಾನು ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿತರು ಈ ಪ್ರಕರಣ ದಾಖಲಾಗುವ ಮುಂಚೆಯಿಂದಲೂ ನನಗೆ ಪರಿಚಯ ಇರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮ ಗ್ರಾಮದ ಅಕ್ಕ ಪಕ್ಕದ ಗ್ರಾಮದವರು ಎಂದರೆ ಸರಿ. 6 ನೇ ಆರೋಪಿ ಮುನಿರಾಜು ಈ ಪ್ರಕರಣ ದಾಖಲಾಗುವ ಮುಂಚೆಯಿಂದಲೂ ನನಗೆ ಪರಿಚಯ ಇರುತ್ತಾರೆ ಎಂದರೆ ಸರಿ. 6 ನೇ ಆರೋಪಿಯನ್ನು ಹೊಸಹಳ್ಳಿ ಪೋಲೀಸ್ ಠಾಣೆಗೆ ಯಾವತ್ತು ಯಾವ ವಿಚಾರಣಕ್ಕೆ ಮತ್ತು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನಿ.ಪಿ-4 ರಿಂದ ನಿ.ಪಿ-24 ಫೋಟೋಗಳನ್ನು ಪೋಲೀಸರವರು ಈ ಪ್ರಕರಣಕ್ಕೆ ಅನುಗುಣವಾಗುವಂತೆ ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲೆಗಳಿಗೆ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ. ಪೋಲೀಸರು ನನಗೆ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ ಮತ್ತು ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಪೋಲೀಸರ ಜೊತೆ ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ನಿ.ಪಿ-1 ಮತ್ತು 3 ದಾಖಲೆಗಳನ್ನು ಪೋಲೀಸ್ ಠಾಣೆಯಲ್ಲಿ ಸೃಷ್ಠಿ ಮಾಡಿರುತ್ತಾರೆ ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

9. ಸ್ಥಳದಲ್ಲಿ ಯಾವುದೇ ಲ್ಯಾಪ್ ಟಾಪ್, ಪ್ರಿಂಟರ್ ಮತ್ತು ಜೀಪು ಇರಲಿಲ್ಲ ಆದ್ದರಿಂದ ಸ್ಥಳದಲ್ಲಿ ಸದರಿ ದಾಖಲೆಗಳನ್ನು ಪ್ರಿಂಟ್ ಮಾಡಲು ಸಾಧ್ಯವಾಗುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀಮತಿ. ಎಸ್.ಪಿ, ವಕೀಲರಿಂದ – 1, 4 ರಿಂದ 6, 9 ಮತ್ತು 10 ನೇ ಆರೋಪಿಗಳ ಪರವಾಗಿಃ**

10. ನಾನು ದ್ವಿತೀಯ ಪಿಯುಸಿ ವರೆಗೆ ಓದಿಕೊಂಡಿರುತ್ತೇನೆ. ನಾನು ಹೊಸಹಳ್ಳಿಯಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಆ ದಿವಸ ನನಗೆ ಮಲ್ಲಿಕಾರ್ಜುನ್ ಪೋಲೀಸರವರು ಠಾಣೆಗೆ ಬರಲು ಕರೆ ಮಾಡಿದರು. ಆ ಸಮಯದಲ್ಲಿ ನಾನು ನನ್ನ ಅಂಗಡಿ ಬಳಿ ಇದ್ದೆ. ನನಗೆ ಪೋಲೀಸರು ಕರೆ ಮಾಡಿದಾಗ ಬೆಳಗ್ಗೆ 9-30 ರಿಂದ 10-00 ಗಂಟೆಯಾಗಿತ್ತು. ನಾನು ಪೋಲೀಸ್ ಠಾಣೆಗೆ ಹೋದಾಗ 9-45 ಗಂಟೆ ಆಗಿತ್ತು. ನಾನು ಪೋಲೀಸ್ ಠಾಣೆಯಲ್ಲಿ ಸುಮಾರು ಅರ್ಧ ಗಂಟೆ ಇದ್ದೆ. ನಾವು ಠಾಣೆಯಿಂದ ಸ್ಥಳಕ್ಕೆ ಬೆಳಗ್ಗೆ 10-45 ರಿಂದ 11-00 ಗಂಟೆಗೆ ಹೊರಟಿರುತ್ತೇವೆ. ನಾವು ಸ್ಥಳಕ್ಕೆ ತಲುಪಿದಾಗ 11-00 ಗಂಟೆಯಾಗಿತ್ತು. ನಾವು ಜೀಪಿನಲ್ಲಿ 6 ಜನರು ಹೋಗಿದ್ದೆವು.

**ಶ್ರೀಮತಿ ಎಸ್.ಪಿ ವಕೀಲರು ಶ್ರೀ ಪಿ.ವೈ.ಆರ್ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.